(Mr. DEPUTY SPEAKER)

Number moved & withdrawn.	...	...	1
Number moved & discussion of which is incomplete.	...	...	1
Number adjourued	...	...	1

Motions Under Rule 146

Number given notice of.	...	...	4
Number admitted.	...	...	Nil

Calling Attention Notices Under Rule 63

Number given notice of	...	...	2
Number admitted.	...	...	2
Number disposed of.	...	...	1

9-30 A.M.

MEMBER'S REPRESENTATION.

Sri U. M. MADAPPA.—You please take action to amend rule 11.

ಶ್ರೀ ಬಿ. ಎಸ್. ನಾರಾಯಣಸ್ವಾಮಿ.—ಸ್ವಾಮಿ, ಎರಡು ತಿಂಗಳ ಕಾಲವಾದರೂ ಅನೇಕ ಪ್ರಶ್ನೆಗಳಿಗೆ ಉತ್ತರ ದೊರೆತಿಲ್ಲ. ತಾವು ಈಗ ತಾನೆ ಹೇಳಿದ ಪ್ರಕಾರ 150 ಪ್ರಶ್ನೆಗಳಿಗೆ ಸರ್ಕಾರದಿಂದ ಉತ್ತರಗಳು ತಲುಪಿಲ್ಲ. ಇದಕ್ಕೆ ಕಾರಣವೇನು ? ಎರಡು ತಿಂಗಳ ಕಾಲ ಇಲ್ಲಿ ಕುಳಿತು, ಅತಿ ಮುಖ್ಯವಾದ ಪ್ರಶ್ನೆಗಳಿಗೆ ಬಹುಶಃ ಸರ್ಕಾರಕ್ಕೆ ಉತ್ತರ ಒದಗಿಸುವುದಕ್ಕೆ ಕಷ್ಟ ಬರಬಹುದು ಎಂದು ಕಾಣುತ್ತದೆ. ಅಂದ ಮಾತ್ರಕ್ಕೆ ಪ್ರಶ್ನೆಗಳನ್ನು ಪರಿಶೀಲಿಸುವುದಕ್ಕೆ ನಮಗೆ ಅವಕಾಶ ಬೇಡವೇ ? ಇದರಿಂದ ನಿಜವಾಗಿಯೂ ಸದಸ್ಯರ ಹಕ್ಕಿಗೆ ಲೋಪ ಬಂದಿದೆ. ಇದನ್ನು ತೀರ್ಮಾನಿಸಿ ಇಂಥ ಲೋಪಕ್ಕೆ ಅವಕಾಶವಿಲ್ಲದಂತೆ ಮಾಡಬೇಕೆಂದು ಸೂಚಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಹನ್ನೊಂದು ಅರ್ಧ ಗಂಟೆ ಚರ್ಚೆಗೆ ಸೂಚನೆಗಳು ಬಂದಿದ್ದು ಅದರಲ್ಲಿ ಒಂಬತ್ತಕ್ಕೆ ಅವಕಾಶ ಕೊಟ್ಟು ಒಂದು ಮಾತ್ರ ಚರ್ಚೆಯಾಗಿದೆ ಎಂದು ಹೇಳಿದಿರಿ. ಉಳಿದುವನ್ನು ಚರ್ಚೆ ಮಾಡುವುದಕ್ಕೆ ಸರ್ಕಾರದವರು ತಯಾರಿರಲಿಲ್ಲವೇ ?

ಉಪಾಧ್ಯಕ್ಷರು.—ಸರ್ಕಾರಕ್ಕೆ ಏನೂ ಸಂಬಂಧವಿಲ್ಲ.

Sri C. M. ARUMUGHAM.—Sri Narasimhan myself and have given a short notice question regarding the formation of the Sanitary Board. So far we have not received any reply. We do not know if it has been admitted or not.

Mr. DEPUTY SPEAKER.—I will look into it.

Sri C. M. ARUMUGHAM.—You have been good enough to furnish so much information and it would not be difficult to tell us what happened to this question.

Sri G. VENKATAI GOWDA.—It ceases to be a short notice question if it is to be answered next session or so.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊನ್ನೆತಾನೇ ಅಧ್ಯಕ್ಷರು, ಪ್ರವಾಸ ಹೋಗುವುದಕ್ಕೆ ಮುಂಚೆ ಒಂದು ನಂದರ್ಭದಲ್ಲಿ, ಸರ್ಕಾರದವರಿಗೆ ಉತ್ತರಗಳನ್ನೊದಗಿಸಲು ಏನಾದರೂ ಕಷ್ಟ ಎದ್ದರೆ, ಆ ಬಗ್ಗೆ ಕಾಗದವನ್ನು ಬರೆಯುಲು ಎಂದು ಹೇಳಿದರು. 150 ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲವೆಂದರೆ ಸರ್ಕಾರದವರು ಆ ಬಗ್ಗೆ ಏನಾದರೂ ತಮಗೆ ಬರೆದಿದ್ದಾರೆಯೇ ಎಂದು ಕೇಳುತ್ತೇನೆ.

ಉಪಾಧ್ಯಕ್ಷರು.—ಬರೆದಿದ್ದಾರೆ.

ಶ್ರೀ ಎಂ. ಲಿಂಗೇಗೌಡ.—ನಾನು ಒಂದು ಅಲ್ಪ ಕಾಲಾವಧಿ ಪ್ರಶ್ನೆಯನ್ನು ಕಳಿಸಿದ್ದೆ, ಇರ್ವೀಗೇಷ್ ಸ್ಕೀಂ ನಲ್ಲಿ ಹಣಬೇಕೆಂದು ಮೈಸೂರು ಸರ್ಕಾರದವರು ಇಂಡಿಯಾ ಸರ್ಕಾರಕ್ಕೆ ಬರೆದಿಲ್ಲ ಎಂಬುದಾಗಿ ಕೇಂದ್ರದ ಉಪಮಂತ್ರಿಗಳಾದ ಎಂ. ವಿ. ಕೃಷ್ಣಪ್ಪನವರು ಕೋರಾರದಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿದ್ದರು, ಈ ಅಲ್ಪ ಕಾಲಾವಧಿ ಪ್ರಶ್ನೆಯ ವಿಚಾರವೇನಾಯಿತೆಂಬುದು ಗೊತ್ತಾಗಲಿಲ್ಲ.

ಶ್ರೀ ಬಿ. ಡಿ. ಜತ್ತಿ.—ಸರ್ಕಾರದ ಕಡೆಯಿಂದ ಒಬ್ಬ ಸ್ಪೆಷಲ್ ಸೆಕ್ರೆಟರಿಯವರನ್ನು ಕೇಂದ್ರ ಸರ್ಕಾರದೊಡನೆ ಮಾತನಾಡಲು ಕಳಿಸಿಪ್ಪೆವು, ಅವರು ಎರಡನೆಯ ಕಂತಿನಲ್ಲಿ ಹಣ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಜಿ. ವೆಂಕಟೇಗೌಡ—ಅವರು ಹಣವನ್ನು ಕೊಡುವುದಕ್ಕೆ ಮೊದಲು ಸರ್ಕಾರದ ಕಡೆಯಿಂದ ಹಣವನ್ನೊದಗಿಸುವುದಕ್ಕೆ ಏಕೆ ವ್ಯವಸ್ಥೆ ಮಾಡಬಾರದು ?

ಶ್ರೀ ಬಿ. ಡಿ. ಜತ್ತಿ.—ಯಾವ ರೀತಿ ಮಾಡಬೇಕು ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಹಣವನ್ನು ಹೇಗೆ ಬೇಗನೇ ಕೊಡಬೇಕೋ ಆ ಪ್ರಕಾರ ಸರ್ಕಾರ ಮಾಡುತ್ತದೆ.

ಶ್ರೀ ಜಿ. ವೆಂಕಟೇಗೌಡ.—ಅಷ್ಟರೊಳಗಾಗಿ ಈಗ ತೆಗೆದಿರುವ ಬಾವಿಗಳನ್ನೆಲ್ಲ ಕುಸಿದು ಹೋಗುತ್ತವೆ. ಮಾಡಿದ ಕಾರ್ಯ ಸಫಲವಾಗಬೇಕೆನ್ನುವ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಶ್ರೀ ಬಿ. ಡಿ. ಜತ್ತಿ.—ಸರ್ಕಾರ ತೆಗೆದುಕೊಂಡಂಥ ಕಾರ್ಯಕ್ರಮವನ್ನು ಪೂರ್ತಿಕೆ ಮಾಡುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಕೇಂದ್ರ ಸರ್ಕಾರದ ಕೂಡ ಮಾತನಾಡಲು ಒಬ್ಬ ಸ್ಪೆಷಲ್ ಸೆಕ್ರೆಟರಿಯವರನ್ನು ಕಳಿಸಿದ್ದೆವು, ಈಗ ಕೇಂದ್ರ ಸರ್ಕಾರದವರು ಹಣ ಕೊಡುತ್ತೇವೆಂದು ಹೇಳಿದ್ದಾರೆ. ಆ ಹಣ ಬಂದ ಕೂಡಲೇ ಕೊಡುತ್ತೇವೆ.

NON-OFFICIAL RESOLUTION *Re.* RESIGNATION OF MINISTERS BEFORE GENERAL ELECTIONS Debate (*continued*).

†ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಅಧ್ಯಕ್ಷರೇ, ವಿರೋಧ ಪಕ್ಷದವರಾದ, ನಮ್ಮ ಪ್ರಜಾಸೋಷಿಯಲಿಸ್ಟ್ ಪಕ್ಷದ ಮಾನ್ಯ ಸದಸ್ಯರಾದ ರೇವಣಸಿದ್ದಪ್ಪನವರು ಈ ನಿರ್ಣಯವನ್ನು ತಂದಿರುವುದು ಬಹಳ ಮುಖ್ಯವಾದುದು. ಇದರ ಹಿನ್ನೆಲೆ ಏನಿದೆ ಎನ್ನುವುದನ್ನು ಕಾಂಗ್ರೆಸ್ ಆಡಳಿತದಲ್ಲಿರುವ ಮಂತ್ರಿಗಳು ಮತ್ತು ಸದಸ್ಯರೂ ಬಹು ಎಚ್ಚರಿಕೆಯಿಂದ ತಿಳಿದುಕೊಳ್ಳಬೇಕಾಗಿದೆ. 1947 ರಿಂದೀಚೆಗೆ ಮಹಾ ಚುನಾವಣೆಗಳಲ್ಲಿ ಏನೇನು ನಡೆದಿದೆ, ಕಾನೂನಿಗೆ ವಿರೋಧವಾಗಿ ಏನೇನು ನಡೆದಿದೆ ಎನ್ನುವುದನ್ನು ಅಂಕಿ ಅಂಶಗಳ ಸಮೇತ ಇಲ್ಲಿ ಮಾತನಾಡುವುದಾದರೆ ಸುಮಾರು ಎರಡು-ಮೂರು ದಿವಸಗಳಾದರೂ ವರ್ಣಿಸಲು ಅಸಾಧ್ಯವಾಗುತ್ತದೆ. ಮಹಾ ಚುನಾವಣೆಗಳಲ್ಲಿ ಸಾಮಾನ್ಯ ಜನತೆಗೆ ಏನೇನನ್ನು ಹೇಳಿದ್ದಿರೋ ಅದನ್ನೆಲ್ಲ ನೆರವೇರಿಸಲು ವಿಫಲರಾಗಿದ್ದೀರಿ ಮತ್ತು ಕಾಂಗ್ರೆಸ್ ನೀತಿಗೆ ವಿರೋಧವಾಗಿ ಮಹಾತ್ಮ ಗಾಂಧೀಜಿ ಮತ್ತು ಜವಹರ್‌ಲಾಲ್ ನೆಹರೂ ಅವರ ಹೆಸರನ್ನೂ ಕೇಳಿಕೊಂಡು ಚುನಾವಣೆಗಳಲ್ಲಿ ಮಾಡುವಾರದ್ದನ್ನೆಲ್ಲ